whether any facilities have been provided in the Plantations in Hassan District and the question of providing group hospitals is contained in the labour rules. If such information is extremely difficult to obtain, then we cannot put supplementaries at all.

Mr. SPEAKER.—The Hon'ble Member has put already many supplementaries.

Sri M. C. NARASIMHAN.—The Hon'ble Minister said that action was being taken in respect of permanency of tenure. Has it come to the notice of the Hon'ble Labour Minister that the Labour Act does not contemplate anything with regard to tenure of service?

Sri B. VAIKUNTA BALIGA.—With regard to protecting the interests of labour, even if it is not provided in the Rules, every equitable step will be taken to persuade the planters to provide facilities and try to enforce the rules and do all that is necessary to protect the interests of labour.

---

2 P.M.

Land received in Bhoodan Movement.

Q.—161. Sri S. MUNI RAJU (Chickballapur).—

Will the Government be pleased to state:—

(*a*) the extent of land received by them in Bhoodan movement;

(*b*) the extent of land cultivated last year through the Education Department?

A.—Sri V. VENKATAPPA (Minister for Education) —

(*a*) 31,306 acres and 39 guntas.

(*b*) 9,595 acres and 4½ guntas.

ಶ್ರೀ ಎಸ್. ಮುನಿರಾಜು.—9,595 ಎಕರೆ 4½ ಗುಂಟೆ ಜಮೀನನ್ನು ಸಾಗುವಳಿ ಮಾಡಿದ್ದರಿಂದ ಎಷ್ಟು ಆದಾಯ ಬಂತು?

ಶ್ರೀ ವಿ. ವೆಂಕಟಪ್ಪ.—19 ಸಾವಿರ ಚಿಲ್ಲರೆ ರೂಪಾಯಿಗಳು ಮತ್ತು 573 ಪಲ್ಲ ಬತ್ತ, 150 ಮಣ ಆಲೂಗೆಡ್ಡೆ.

ಶ್ರೀ ಎಸ್. ಮುನಿರಾಜು.—ಉಳಿದ ಜಮೀನನ್ನೇ ನಾದರೂ ಸಾಗುವಳಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಾ?

ಶ್ರೀ ವಿ. ವೆಂಕಟಪ್ಪ.—ಹೌದು, ಮಾಡುತ್ತಿದೆ.

ಶ್ರೀ ಜಿ. ದುಗ್ಗಪ್ಪ.—ಇಷ್ಟು ಎಕರೆ ಸಾಗುವಳಿ ಮಾಡಬೇಕಾದರೆ ಎಷ್ಟು ಹಣ ವಿದ್ಯಾ ಇಲಾಖೆಯಿಂದ ಖರ್ಚಾಗಿದೆ?

ಶ್ರೀ ವಿ. ವೆಂಕಟಪ್ಪ.—ನುಮಾರು ಐದು ಸಾವಿರ ರೂಪಾಯಿಗಳು.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—ಬಾಕಿ ಜಮೀನುಗಳಲ್ಲಿ ಉತ್ಪತ್ತಿ ಬಾರದಿರುವುದಕ್ಕೆ ಕಾರಣ ಬಂಜರು ಜಮೀನು, ಉಪಯೋಗವಿಲ್ಲದಿರುವ ಜಮೀನು ಬಂದಿರುವುದುತಾನೆ?

ಶ್ರೀ ವಿ. ವೆಂಕಟಪ್ಪ.—ಕೆಲವು ಹಾಗಿವೆ; ಕೆಲವು ಇನ್ನೂ ಸ್ವಾಧೀನಕ್ಕೆ ಬಂದಿಲ್ಲ.

Sri V. P. DEENADAYALU NAIDU.—Have they taken title over the lands taken possession of?

ಶ್ರೀ ವಿ. ವೆಂಕಟಪ್ಪ.—ನಮ್ಮ ಸ್ವಾಧೀನಕ್ಕೆ ಬಂದಿರುವುದಕ್ಕೆಲ್ಲಾ ಟೈಟಲ್ ಬರೆಸಿಕೊಂಡಿದೆ.

Dr. R. NAGAN GOWDA.—How many schools are concerned in the cultivation of these 9,000 and odd acres?

Sri V. VENKATAPPA.—I cannot immediately give that information.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸಾಗುವಳಿಯಾಗದೆ ಉಳಿದಿರುವ ನುಮಾರು 22 ಸಾವಿರ ಎಕರೆಗಳ ಬಾಬತ್ತು ಕಂದಾಯ ಎಷ್ಟು ವಸೂಲು ಮಾಡಿದ್ದೀರಿ?

ಶ್ರೀ ವಿ. ವೆಂಕಟಪ್ಪ.—ಅದನ್ನು ರೆವೆನ್ಯೂ ಇಲಾಖೆಯವರಲ್ಲಿ ಕೇಳಬೇಕು.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—ಈ ಜಮೀನುಗಳಿಗೆ ಕಂದಾಯದ ರಿಮಿಷ್ಷ ಇಲ್ಲವೇ?

ಶ್ರೀ ವಿ. ವೆಂಕಟಪ್ಪ.—ನಮ್ಮ ಸ್ವಾಧೀನಕ್ಕೆ ಬಂದಿರುವುದಕ್ಕೆ ಮಾತ್ರ. ಉಳಿದವುಗಳ ವಿಚಾರ ಕೇಳಬೇಡಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈಗ ಹಾಳು ಬಿದ್ದಿರುವ ಭೂಮಿಯಿಂದ ಬರಬೇಕಾದ ವರಮಾನವೇನು ನಷ್ಟವಾಗಿದೆಯೋ ಅದನ್ನು ಯಾರು ಕಟ್ಟಿಕೊಡಬೇಕು? (ನಗು).

ಶ್ರೀ ವಿ. ವೆಂಕಟಪ್ಪ.—ಯಾರೂ ಕಟ್ಟಿಕೊಡುವ ಹಾಗಿಲ್ಲ. (ನಗು).

ಶ್ರೀ ವೈ. ವೀರಪ್ಪ.— 31 ಸಾವಿರ ಚಿಲ್ಲರೆ ಎಕರೆಗಳ ಪೈಕಿ 9,595 ಎಕರೆ 4½ ಗುಂಟೆ ಸಾಗುವಳಿಯಾಗಿದೆ. ಉಳಿದುದು ಯಾರ ವಶದಲ್ಲಿದೆ?

ಶ್ರೀ ವಿ. ವೆಂಕಟಪ್ಪ.—ಈಗ 15 ಸಾವಿರ ಚಿಲ್ಲರೆ ಎಕರೆಗಳು ಸ್ವಾಧೀನಕ್ಕೆ ಬಂದಿವೆ; ಉಳಿದಿರುವುದು ಸ್ವಾಧೀನಕ್ಕೆ ಬಂದಿಲ್ಲ. 9 ಸಾವಿರ ಚಿಲ್ಲರೆ ಎಕರೆ ಸಾಗುವಳಿಯಾಗಿರುವುದಲ್ಲದೆ ಆರು ಸಾವಿರ ಎಕರೆ ನ್ಯೂಟಲನ ವಶದಲ್ಲಿದೆ.

ಶ್ರೀ ವೈ. ವೀರಪ್ಪ.—ಸ್ವಾಧೀನಕ್ಕೇಕೆ ಬರಲಿಲ್ಲ?

ಶ್ರೀ ವಿ. ವೆಂಕಟಪ್ಪ.—ಯಾರು ಮೊದಲು ಕೊಡುತ್ತೇವೆಂದು ವಾಗ್ದಾನ ಮಾಡಿದ್ದರೋ ಅವರು ಕೆಲವರು ಸಿಕ್ಕುತ್ತಿಲ್ಲ. ರಿಜಿಸ್ಟ್ರೇಷ್ಷ ಆಗುವುದಕ್ಕೆ ತೊಂದರೆಯಿದೆ, ಹೀಗೆ ಅನೇಕ ಕಾರಣಗಳಿವೆ.

ಶ್ರೀ ಎಂ. ಲಿಂಗೇಗೌಡ.—ಭೂದಾನ ಚಳವಳಿಯಲ್ಲಿ ನರ್ಕಾರಿ ಜಮೀನನ್ನೇ ದಾನವಾಗಿ ಕೊಟ್ಟಿರುವುದು ನರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ವಿ. ವೆಂಕಟಪ್ಪ.—(ನಗುತ್ತಾ) ಕೆಲವು ಹಾಗೆ ಇರಬಹುದು.

ಶ್ರೀ ಎಂ. ಲಿಂಗೇಗೌಡ.—ಸೀದಾ ಮುಖ್ಯ ಮಂತ್ರಿಗಳ ಹತ್ತಿರ ಹೋಗಿ, ನೆಟ್ಟಿಗೆರೆ ಗ್ರಾಮದಲ್ಲಿ ಹತ್ತು

(ಶ್ರೀ ಎಂ. ಲಿಂಗೇಗೌಡ.)

ಎಕರೆ ಸರ್ಕಾರದ ಜಮೀನನ್ನು ದಾನಕೊಟ್ಟಿರುವುದೂ, ಅದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕಾಗದಿರುವುದೂ ಸರ್ಕಾರದ ಅವಗಾಹನೆಗೆ ಬಂದಿದೆಯೇ ?

ಶ್ರೀ ವಿ. ವೆಂಕಟಪ್ಪ.—ಅದಕ್ಕೇ ಅಷ್ಟು ಜಮೀನು ಸ್ವಾಧೀನಕ್ಕೆ ಬಾರದಿರುವುದು.

Sri C. J. MUCKANNAPPA.—May I know the various crops raised in these 9,595 acres and 4½ guntas and the quantity of yield ?

Sri V. VENKATAPPA.—It is impossible to furnish that information now.

ಶ್ರೀ ಕೆ. ವಿ. ಬೈರೇಗೌಡ.—ಭೂದಾನ ಚಳುವಳಿಯಿಂದ ಬಂದಿರುವ ಜಮೀನನ್ನು ಈ ರೀತಿ ಉಪಯೋಗಿಸಬೇಕೆಂದು ಏನಾದರೂ ನೀತಿಯಿದೆಯೇ? ಈಗ ಬಂದಿರುವ 31 ಸಾವಿರ ಎಕರೆ ಚಿಲ್ಲರೆ ಪ್ರದೇಶದಲ್ಲಿ ಸಾಗುವಳಿಗೆ ಬಾರದಿರುವ ಜಮೀನನ್ನು ಬಿಡಬೇಕೆಂದಿದ್ದೀರಾ ?

ಶ್ರೀ ವಿ. ವೆಂಕಟಪ್ಪ.—ಇರುವುದನ್ನು ಬಿಡಬೇಕೆಂದು ಯೋಚನೆಮಾಡಿಲ್ಲ. ಇರುವುದರಲ್ಲಿ ಎಷ್ಟು ಮಟ್ಟಿಗೆ ಉತ್ಪತ್ತಿ ತೆಗೆದುಕೊಳ್ಳಲು ಸಾಧ್ಯವಿದೆಯೋ ಅಷ್ಟು ಮಟ್ಟಿಗೆ ಪ್ರಯತ್ನ ಮಾಡಬೇಕೆಂದಿದೆ.

ಶ್ರೀ ಕೆ. ವಿ. ಬೈರೇಗೌಡ.—ಈ ಯೋಜನೆಯಿಂದ ವಿದ್ಯಾ ಸಂಸ್ಥೆಗಳಿಗೆ ಅನುಕೂಲವಾಗುತ್ತದೆಂದು ಕಂಡು ಬಂದಿದೆಯೇ ?

ಶ್ರೀ ವಿ. ವೆಂಕಟಪ್ಪ.—ಕೆಲವು ಕಡೆಗಳಲ್ಲಿ ಅನುಕೂಲವಾಗುತ್ತದೆಂದು ಕಂಡು ಬಂದಿದೆ.

ಶ್ರೀ ಎ. ಆರ್. ಬದರಿನಾರಾಯಣ.—ಈಗ 15 ಸಾವಿರ ಚಿಲ್ಲರೆ ಎಕರೆಗಳು ಸ್ವಾಧೀನಕ್ಕೆ ಬಂದಿವೆಯೆಂದು ಹೇಳಿದಿರಿ. ಅದರಲ್ಲಿ 6 ಸಾವಿರ ಎಕರೆಗಳಿಗೆ ಬೀಳು ಕಂದಾಯ ಕೊಡುತ್ತಿದ್ದೀರಾ ?

ಶ್ರೀ ವಿ. ವೆಂಕಟಪ್ಪ.—ಹೌದು.

ಶ್ರೀ ಎ. ಆರ್. ಬದರಿನಾರಾಯಣ.—ಆ ಕಂದಾಯ ಎಷ್ಟಾಗುತ್ತದೆ ?

Sri V. VENKATAPPA.—It is not possible to give that information now.

Sri V. P. DEENADAYALU NAIDU.—Is the Bhoodan movement in progress now ?

Sri V. VENKATAPPA.—No.

Sri G. B. SHANKARA RAO.—Are the Government in favour of Bhoodan movement ?

Sri V. VENKATAPPA.—Which Bhoodan movement ?

ಶ್ರೀ ಜಿ. ಬಿ. ಶಂಕರರಾವ್.—ಶ್ರೀ ಹನುಮಂತಯ್ಯನವರ ಕಾಲದಲ್ಲಿ ಷುರುವಾದ ಚಳವಳಿ.

ಶ್ರೀ ವಿ. ವೆಂಕಟಪ್ಪ.—ಅದಕ್ಕೆ ಸಂಬಂಧಪಟ್ಟಹಾಗೆ ಏನೂ ಕಾರ್ಯಕ್ರಮ ಈಗಿಲ್ಲ. ಒಂದು ಕಾಲವನ್ನು ಗೊತ್ತು ಮಾಡಿತ್ತು. ಆ ಕಾಲದಲ್ಲಿ ಎಷ್ಟು ಭೂಮಿ ಬಂತೋ ಅದನ್ನು ಹಂಚಿಕೆ ಮಾಡುವುದಕ್ಕೆ ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೆ ಕಾರ್ಯಕ್ರಮ ಏದೆಯೇ ಹೊರತು ಪುನಃ ಭೂಮಿ ಕೇಳಿ ತೆಗೆದುಕೊಳ್ಳುವ ಕಾರ್ಯಕ್ರಮ ಹಾಕಿಕೊಂಡಿಲ್ಲ.

ಶ್ರೀ ಡಿ. ಟಿ. ನೀತಾರಾಮರಾವ್.—ಸಾಗುವಳಿ ಮಾಡಲ್ಪಟ್ಟಿರುವ ಒಂಬತ್ತುಸಾವಿರ ಚಿಲ್ಲರೆ ಎಕರೆಗಳಿಂದ ಬಂದಿರುವ ಉತ್ಪತ್ತಿಯನ್ನು ಯಾವ ರೀತಿ ವಿನಿಯೋಗಿಸಿದ್ದೀರಿ ?

ಶ್ರೀ ವಿ. ವೆಂಕಟಪ್ಪ.—ಉತ್ಪತ್ತಿಯಲ್ಲಿ ಶೇಕಡ 60 ಭಾಗ ವಿದ್ಯಾರ್ಥಿಗಳಿಗೆ ಮಧ್ಯಾಹ್ನ ಊಟ ಹಾಕುವುದಕ್ಕೆ ಉಪಯೋಗಿಸಬೇಕು. ಶೇಕಡ 30 ಭಾಗ ಉಪಾಧ್ಯಾಯರಿಗೆ ಕೊಡಬೇಕು, ಶೇಕಡ 10 ಭಾಗ ರಿಸರ್ವ್‌ನಲ್ಲಿಡಬೇಕು ಎಂದು ಗೊತ್ತುಮಾಡಿದೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.—ಅದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೆ ಅಡ್ಮಿನಿಸ್ಟರ್ ಮಾಡುವುದಕ್ಕೆ ಕಾಸ್ಟ್ ಆಫ್ ಅಡ್ಮಿನಿಸ್ಟ್ರೇಷನ್ ಎಷ್ಟು ?

ಶ್ರೀ ವಿ. ವೆಂಕಟಪ್ಪ.—ತಿಂಗಳಿಗೆ ಸುಮಾರು ಒಂದು ಸಾವಿರ ರೂಪಾಯಿಯಾಗುತ್ತದೆ.

ಶ್ರೀ ಬಿ. ಇ. ರಾಮಯ್ಯ.—ಈ ಭೂದಾನ ಚಳವಳಿಯಲ್ಲಿ ಬಂದಿರುವ ಭೂಮಿಯಲ್ಲಿ ಅನೇಕ ಭಾಗಗಳಿಂದ ಏನೂ ಪ್ರಯೋಜನವಿಲ್ಲದಿರುವುದರಿಂದ ಹಳ್ಳಕೊಳ್ಳಗಳಿಂದ ಕೂಡಿರುವುದರಿಂದ ಅದನ್ನು ಉಪಯೋಗಿಸಿಕೊಳ್ಳಲು ಸಾಧ್ಯವಿಲ್ಲದೆ ಸಂಬಂಧಪಟ್ಟ ಸಮಿತಿಯವರು ಕೈಯಿಂದ ಹಾಕಿ ಖಜಾನೆಗೆ ಹಣ ಕಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವಿ. ವೆಂಕಟಪ್ಪ.—ಅಂಥಾದ್ದು ಗಮನಕ್ಕೆ ಬಂದಿಲ್ಲ.

Sri H. C. LINGA REDDY.—Have the Government distributed this land among all the schools in the State ?

ಶ್ರೀ ವಿ. ವೆಂಕಟಪ್ಪ.—ಅದು ಹೇಗಾಗುತ್ತದೆ? ಯಾವ ಸ್ಕೂಲುಗಳಿಗೆ ಹತ್ತಿರವಿದೆಯೋ ಅದನ್ನು ನೋಡಿ ಹಂಚಿಕೆ ಮಾಡಬೇಕಾಗುತ್ತದೆ.

ಶ್ರೀ ಎಂ. ರಾಜಶೇಖರಮೂರ್ತಿ.—19 ಸಾವಿರ ಚಿಲ್ಲರೆ ರೂಪಾಯಿಗಳ ಉತ್ಪತ್ತಿ ಬಂದಿದೆಯೆಂದು ಹೇಳಿದರು. ಅಷ್ಟು ಕಡಮೆ ಉತ್ಪತ್ತಿ ಬರಲು ಕಾರಣವೇನು ?

ಶ್ರೀ ವಿ. ವೆಂಕಟಪ್ಪ.—ಕೆಲವು ಭೂಮಿಗಳಲ್ಲಿ ಏನೂ ಬರುವುದಿಲ್ಲ. ಕೆಲವು ಕಡೆ ಹುರುಳಿ ಬರುತ್ತದೆ. ಆದ್ದರಿಂದ ಇಂಥಾದ್ದೇ ಕಾರಣ ಎಂದು ಹೇಳುವುದಕ್ಕಾಗುವುದಿಲ್ಲ.

Sri G. VENKATAI GOWDA.—Is there any land the possession of which has not been recovered in spite of the fact that title has been in favour of the Government ?

ಶ್ರೀ ವಿ. ವೆಂಕಟಪ್ಪ.—ಅದನ್ನು ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ರಾಮಪ್ಪ.—ಉತ್ಪತ್ತಿ ಇಷ್ಟು ಎಂದು ಹೇಳಿರುವುದು ಗ್ರಾಸ್ ಇಕಂ ಅಥವಾ ನೆಟ್ ಇಕಂ ಎಂಬುದನ್ನು ತಿಳಿಸುತ್ತೀರಾ ? ಖರ್ಚು ಎಷ್ಟಾಗಿದೆ ?

ಶ್ರೀ ವಿ. ವೆಂಕಟಪ್ಪ.—ಗ್ರಾಸ್ ಇಕಂ ..... ಸುಮಾರು ಐದು ಸಾವಿರ ರೂಪಾಯಿ ಖರ್ಚಾಗಿದೆ.

ಶ್ರೀ ಎಂ. ರಾಮಪ್ಪ.—ಬೇರೆ ಯಾವುದಾದರೂ ಖರ್ಚಿದೆಯೇ ?

ಶ್ರೀ ವಿ. ವೆಂಕಟಪ್ಪ.—ಈಗ ಆಗಿರುವುದು ಇಷ್ಟೇ ಖರ್ಚು

Sri ANNA RAO GANAMUKHI.—May I know whether the schools utilised this land to impart agricultural education to the students ?

Sri V. VENKATAPPA.—No.

Sri K. C. MALLAPPA.—Is it for the purpose of imparting basic education that the lands have been acquired?

Sri V. VENKATAPPA.—Not only for that.

SHORT NOTICE QUESTION AND ANSWER.

Finance Ministers' Meeting at Bombay

Q.—11. Sri M. C. NARASIMHAN (K.G.F.).—

Will the Government be pleased to state.—

(*a*) whether the Finance Minister attended the recent All-India meeting of the Finance Ministers reported to be held at Bombay;

(*b*) the decisions that were taken at the said meeting ?

A.—Sri T. MARIAPPA (Minister for Finance).—

(*a*) Yes.

(*b*) The States were advised to concentrate on small savings and not to approach the open market for loans.

Sri M. C. NARASIMHAN.—Sir, what is the amount proposed to be collected from the small savings scheme so far as the Mysore State is concerned?

Sri T. MARIAPPA.—We propose to collect about five crores of rupees.

Sri M. C. NARASIMHAN.—It is stated in the answer that decisions were taken at the said meeting to advise the states to contribute to the small savings scheme. Was that the only decision taken in respect of the Mysore State ?

Sri T. MARIAPPA.—There were no separate decisions for separate States.

Sri M. C. NARASIMHAN.—The question is specific. Was that the only decision taken at the Bombay Finance Ministers' Conference? The answer pertains only to the small savings scheme. Is there any other decision ?

Sri T. MARIAPPA —The point is this. In fact no decisions were taken but certain understandings were arrived at.

Sri M. C. NARASIMHAN.—What were the other understandings, Sir ?

Sri T. MARIAPPA.—Sir, I am not prepared to disclose in public interest.

Sri G. VENKATAI GOWDA.—The Hon'ble Minister was pleased to say that five crores of rupees would be collected. What would be the State's share in that, Sir ?

Sri T. MARIAPPA.—As per the understanding arrived at, the Government of India have agreed to give us two-thirds of the total collections provided we do not come into the open market.

ಶ್ರೀ ಎಂ. ರಾಮಯ್ಯ.—ಇದಕ್ಕೋಸ್ಕರ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ತಾವು ಯೋಚನೆ ಮಾಡಿದ್ದೀರಿ ?

ಶ್ರೀ ಟಿ. ಮರಿಯಪ್ಪ.—ಇಂಡಿಯಾ ಸರಕಾರದವರು ಈಗಾಗಲೇ ಇಲ್ಲಿ ರೀಜನಲ್ ಆಫೀಸನ್ನು ತೆರೆದಿದ್ದಾರೆ. ಮೈಸೂರು ಸರಕಾರದವರೂ ಕೂಡ ಅವರ ಜೊತೆಯಲ್ಲಿ ಕೋ ಆರ್ಡಿನೇಟ್ ಮಾಡಿ ಒಂದು ಯೋಜನೆಯನ್ನು ತಯಾರುಮಾಡಿದ್ದಾರೆ. ಅದರ ಪ್ರಕಾರ ಈಗ ಈ ಡ್ರೈವನ್ನು ಇನ್ನೂ ಇಫೆಕ್ಟಿವ್ ಮಾಡಬೇಕೆಂದು ಆಲೋಚಿಸಿದ್ದೇವೆ.

Sri V. S. PATIL.—May I know, Sir, what is the reason for coming to this decision of small savings scheme ?

Sri T. MARIAPPA.—Sir, the smal savings scheme is already in force. In fact, the Hon'ble Member is aware that according to the Second Five-Year Plan, the entire country has to collect 500 crores of rupees under the small savings scheme. Under this the Government of India advised us to concentrate more effectively on collections under the small savings scheme.

ಶ್ರೀ ಯು. ಎಂ. ಮಾದಪ್ಪ.—ಈ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ಮೈಸೂರು ಸ್ಟೇಟಿನಲ್ಲಿ ಓಪನ್ ಮಾರ್ಕೆಟ್ಟಿನಲ್ಲಿ ಎಷ್ಟು ಸಾಲ ಎತ್ತಬೇಕೆಂದು ತೀರ್ಮಾನಿಸಿದ್ದೀರಿ ?

ಶ್ರೀ ಟಿ. ಮರಿಯಪ್ಪ.—ಬಡ್ಜೆಟ್ಟಿನಲ್ಲಿರುವಂತೆಯೇ ಐದು ಕೋಟಿ ಸಾಲವನ್ನು ಎತ್ತಬೇಕೆಂದು ಪ್ರೊವಿಷನಲ್ ಆಗಿ ಪ್ರಾವಿಷನ್ನನ್ನು ಮಾಡಿಕೊಂಡಿದ್ದೆವು.

Sri ANNA RAO GANAMUKHI.—May I know whether the Government of Mysore have decided to take advantage of small savings scheme or the market loan ?

ಶ್ರೀ ಟಿ. ಮರಿಯಪ್ಪ.—ನಾವು ಮೊದಲು ಆಲೋಚನೆ ಮಾಡಿದ್ದದ್ದು ಮಾರ್ಕೆಟ್ಟು ಲೋನನ್ನು ಎತ್ತಬೇಕು ಮತ್ತು ಸ್ಮಾಲ್ ಸೇವಿಂಗ್ಸ್ ಸ್ಕೀಮನ್ನೂ ಅದರ ಜೊತೆಯಲ್ಲಿಯೇ ಮಾಡಬೇಕು ಎಂದು.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಆದರೆ ಈಗ ಸರಕಾರದವರು ಯಾವ ನಿರ್ಧಾರಕ್ಕೆ ಬಂದಿದ್ದಾರೆ ?

ಶ್ರೀ ಟಿ. ಮರಿಯಪ್ಪ.—ಕೇಂದ್ರ ಸರಕಾರದವರು ಒಂದು ಬೇಸಿಸ್ಸನ್ನು ಫಿಕ್ಸ್ ಮಾಡಿದ್ದಾರೆ.